**ಸಾಕ್ಷಿಯನ್ನು ದಿಃ 06.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ. ಎಂಪಿಆರ್ ವಕೀಲರಿಂದ ವಾದಿ ಪರಃ**

ನಾನು 8 ನೇ ತರಗತಿ ಓದಿದ್ದೇನೆ. ಕನ್ನಡ ಓದಲು ಬರೆಯಲು ಬರುತ್ತದೆ. ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಜಮೀನನ್ನು ತನ್ನದು ಎಂದು ವಾದಿ ದಾವೆ ಹೂಡಿದ್ದಾಳೆ. ವಾದಿ ಏನು ದಾಖಲೆ ಸಲ್ಲಿಸಿದ್ದಾಳೆ ನಾನು ನೋಡಿಲ್ಲ. ವಾದಿಯ ಖಾತೆ ನಂಬರ್ ಏನು ಎಂದು ನನಗೆ ನೆನಪಿಲ್ಲ. ನನ್ನ ಸ್ವತ್ತಿನ ಖಾತೆ ಸಂಖ್ಯೆ ಜಾಸ್ತಿ ಇರುವುದರಿಂದ ಮರೆತು ಹೋಗಿದ್ದೇನೆ. ನಾನು ವಿಮಲಾಬಾಯಿ ರವರಿಂದ ನನ್ನ ಸ್ವತ್ತನ್ನು ಖರೀದಿ ಮಾಡಿದ್ದೇನೆ. ಸದರಿ ವಿಮಲಾಬಾಯಿರವರಿಗೆ ಸರ್ಕಾರದಿಂದ ಬಂದಿರುತ್ತದೆ. ನಿಡಿ–1 ರ ಪ್ರಕಾರ ವಿಮಲಾಬಾಯಿರವರಿಗೆ ಪ್ರತಿವಾದಪತ್ರದ ಸ್ವತ್ತು ಬಂದಿರುತ್ತದೆ ಎಂದರೆ ಸರಿ. ನಿಡಿ–1 ರಲ್ಲಿ ಸ್ವತ್ತಿನ ಪೂರ್ವಕ್ಕೆ ಮುಕುಂದರಾವ್ ಎಂದು ನಮೂದು ಇದೆ. ನಿಡಿ–2 ನಾನು ಖರೀದಿ ಮಾಡಿದ ಖರೀದಿಪತ್ರವಾಗಿರುತ್ತದೆ ಎಂದರೆ ಸರಿ. ನಿಡಿ–2 ರಲ್ಲಿ ಪ್ರತಿವಾದಪತ್ರದ ಸ್ವತ್ತಿನ ಪೂರ್ವಕ್ಕೆ ತಿಮ್ಮರಾಯಸ್ವಾಮಿ ದೇವಸ್ಥಾನ ಎಂದು ಉಲ್ಲೇಖ ಇದೆ ಎಂದರೆ ಸರಿ. ಪೂರ್ವಕ್ಕೆ ಇದ್ದ ಮುಕುಂದರಾವ್ ರವರ ಸ್ವತ್ತು ತಿಮ್ಮರಾಯಸ್ವಾಮಿ ದೇವಸ್ಥಾನ ಎಂದು ಯಾವ ರೀತಿ ಆಯಿತು ನನಗೆ ಗೊತ್ತಿಲ್ಲ. ನಿಡಿ–1 ರಲ್ಲಿ ಇರುವ ದಕ್ಷಿಣಕ್ಕೆ ಬರುವ ರಸ್ತೆಯು ನಿಡಿ–2 ರಲ್ಲಿ ದಕ್ಷಿಣಕ್ಕೆ ಮುನಿಯಪ್ಪನವರ ಖಾಲೀ ನಿವೇಶನ ಯಾವ ರೀತಿ ಆಯಿತು ನನಗೆ ಗೊತ್ತಿಲ್ಲ. ನಿಡಿ–1 ರಲ್ಲಿ ಇರುವ ಉತ್ತರಕ್ಕೆ ಬರುವ ಎ.ಆರ್ ರಾಮಯ್ಯರವರ ಮನೆ ನಿಡಿ–2 ರಲ್ಲಿ ಉತ್ತರಕ್ಕೆ ಮುನಿಯಪ್ಪನವರ ಮನೆ ಯಾವ ರೀತಿ ಆಯಿತು ನನಗೆ ಗೊತ್ತಿಲ್ಲ. ನಿಡಿ–1 ರಲ್ಲಿ ವಿಮಲಾಬಾಯಿ ರವರ ಸ್ವತ್ತಿನ ಸಂಖ್ಯೆ –3 ಎಂದು ನಮೂದು ಇದೆ ಎಂದರೆ ಸರಿ. ನಿಡಿ–2 ರ ಪ್ರಕಾರ ಖರೀದಿ ಮಾಡುವಾಗ ಸ್ವತ್ತಿನ ಸಂಖ್ಯೆ –108 ಎಂದು ನಮೂದು ಇದೆ ಎಂದರೆ ಸರಿ. ವಿಮಲಾಬಾಯಿಯವರಿಗೆ ಪಂಚಾಯಿತಿಯಲ್ಲಿ ಯಾವ ಸ್ವತ್ತಿಗೆ ಖಾತೆ ಆಯಿತು ಎನ್ನುವುದರ ಬಗ್ಗೆ ನಾನು ಹಾಜರು ಪಡಿಸಿರುವ ದಾಖಲೆ ಹೊರುತು ಪಡಿಸಿ ಬೇರೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ನಿಡಿ–1 ರಲ್ಲಿ ತೋರಿಸಿರುವ ಚಕ್ಕುಬಂದಿ ಸರಿಯಾಗಿದೆ.

ನಿಡಿ-1 ರಲ್ಲಿರುವ ಚಕ್ಕುಬಂದಿಯ ಸ್ವತ್ತನ್ನು ನಾನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ತೋರಿಸಿರುವ ಚಕ್ಕುಬಂದಿಯು ವಾದಿಯ ಆಸ್ತಿಯ ಚಕ್ಕುಬಂದಿ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿಡಿ-2 ರಲ್ಲಿ ವಾದಿಯ ಚಕ್ಕುಬಂದಿ ತೋರಿಸಿ ನಿಡಿ-2 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ದಾವೆ ಹೂಡಿದ ಬಳಿದ ಪ್ರತಿವಾದಪತ್ರದ ಸ್ವತ್ತಿನಲ್ಲಿ ಮನೆ ಕಟ್ಟಿದ್ದೇನೆ. ನಾನು ಪಂಚಾಯಿತಿಯಿಂದ ಮನೆ ಕಟ್ಟಲು ಪರವಾನಿಗೆ ಪಡೆದಕೊಂಡಿಲ್ಲ ಸಾಕ್ಷಿ ಮುಂದುವರೆದು ಸದರಿ ಜಾಗದಲ್ಲಿ ಮನೆ ಇದ್ದು ಅದನ್ನು ಕೆಡವಿ ಮನೆ ಕಟ್ಟಿರುವುದಾಗಿ ನುಡಿಯುತ್ತಾರೆ. ಪಂಚಾಯಿತಿಯಿಂದ ಅಧಿಕಾರಿಗಳು ಬಂದು ನನ್ನ ಸ್ವತ್ತನ್ನು ಪರಿಶೀಲನೆ ಮಾಡಲು ಯಾವುದೇ ತಕರಾರು ಇಲ್ಲ. ನಾನು 18 ಇಂಟು 23 ಅಡಿ ಮನೆ ಕಟ್ಟಿದ್ದೇನೆ. ನಾನು ಯಾವುದೇ ಸೆಟ್ ಬ್ಯಾಕ್ ಜಾಗವನ್ನು ಬಿಟ್ಟಿರುವುದಿಲ್ಲ. ವಾದಿಯ ಪೂರ್ವ ಪಶ್ಚಿಮ 23 ವರೆ ಅಡಿ, ಉತ್ತರ ದಕ್ಷಿಣ 13 ವರೆ ಅಡಿಯನ್ನು ಒತ್ತುವರಿ ಮಾಡಿ ಮನೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಇಂದ ಅಳತೆ ಮಾಡಿ ಒತ್ತುವರಿಯನ್ನು ಗುರುತು ಮಾಡಿದ್ದಲ್ಲಿ ನನ್ನ ಅಸ್ತಿಯನ್ನು ತೆರವುಗೊಳಿಸಲು ಯಾವುದೇ ತೊಂದರೆ ಇಲ್ಲ. ಯಾವ ಸರ್ವೇ ನಂಬರ್ ನಲ್ಲಿ ನಿವೇಶನಗಳನ್ನು ಮಾಡಿ ವಿಮಲಾಬಾಯಿರವರಿಗೆ ಎಲ್ಲಿ ನಿವೇಶವನ್ನು ವಿತರಿಸಲಾಯಿತು ನನಗೆ ಗೊತ್ತಿಲ್ಲ. ವಿಮಲಾಬಾಯಿ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಬಾಧ್ಯತೆ ಇಲ್ಲದೇ ಇರುವ ಕಾರಣ ಅವರಿಂದ ಖರೀದಿ ಮಾಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಪ್ರತಿವಾದಪತ್ರದ ಸ್ವತ್ತಿಗೆ ಇ-ಖಾತೆ ಆಗಿರುವುದಿಲ್ಲ. ವಾದಿ ನನ್ನ ಸ್ವತ್ತಿಗೆ ಎಂದಿಗೂ ತೊಂದರೆ ಕೊಟ್ಟಿಲ್ಲ ಬದಲಾಗಿ ನಾನು ತೊಂದರೆ ಕೊಟ್ಟಿದ್ದಕ್ಕೆ ಆಕೆಯು ದಾವೆ ಸಲ್ಲಿಸಿದ್ದಾಳೆ ಎಂದರೆ ಸರಿಯಲ್ಲ.

ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರು)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ